



ಎಂದು ಮಾತಿನ ವರಸೆ ಬದಲಿಸಿ ಹೇಳಿದೆ. ಅವಳ ಕಣ್ಣುಗಳು ತೀಕ್ಷ್ಣಗೊಂಡಿದ್ದನ್ನು ನೋಡಿದೆ. ರೊಟ್ಟಿ ಹಿಡಿದಿದ್ದ ನನ್ನ ಕೈ ಅದುರಿತು. ಏನನ್ನೋ ಹೇಳಬೇಕೆನ್ನುವ ಮಾತುಗಳು ಅವಳ ಗಂಟಲಿನಲ್ಲೇ ಉಳಿದವು. ನನ್ನನ್ನು ಎಲ್ಲಿಗೋ ಕರೆದೊಯ್ಯಲು ಕೈಹಿಡಿದು ಎಳೆಯತೊಡಗಿದಳು.

ಅವಳ ಕೈಗಳಿಂದ ಬಿಡಿಸಿಕೊಳ್ಳಲು ಮನಸ್ಸಾಗಲಿಲ್ಲ. ಏಕೋ ಏನೋ ಅವಳ ಧ್ವನಿ ನನ್ನನ್ನು ಹಿಂಡತೊಡಗಿತು. ನನಗೆ ಅರಿವಿಲ್ಲದಂತೆಯೇ ಅವಳ ಹಿಂದೆ ನಡೆದೆ. ಅದೊಂದು ಇಕ್ಕಟ್ಟಾದ ಓಣಿ. ಹೊಸದಾಗಿ ಏಳುತ್ತಿದ್ದ ಕಟ್ಟಡವೊಂದರ ಪಕ್ಕದಲ್ಲೇ ಅರೆ ನಿರ್ಮಾಣಗೊಂಡಿದ್ದ ಒಂದು ಮನೆ. ಅಲ್ಲಿ ಕಟ್ಟಡದ ಕೆಲಸ ನಿಲ್ಲಿಸಿ ಎಷ್ಟೋ ವರ್ಷಗಳಾಗಿತ್ತು ಎಂದು ಆ ಕಟ್ಟಡದ ಸ್ವರೂಪವೇ ಹೇಳುತ್ತಿತ್ತು. ಅದರ ಗೋಡೆಗಳೆಲ್ಲಾ ಚಳಿ–ಮಳೆ–ಗಾಳಿ–ಬಿಸಿಲಿಗೆ ಸಿಲುಕಿ ಸಂಪೂರ್ಣವಾಗಿ ಜಖಂ ಆಗಿ, ಆಗಲೋ, ಈಗಲೋ ಎನ್ನುವಂತೆ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿತ್ತು. ಮುರಿದ ಬಾಗಿಲ ಮೂಲಕ ಅವಳು ನನ್ನನ್ನು ಒಳಕ್ಕೆ ಎಳೆದೊಯ್ದಳು.

ಕತ್ತಲಿನಿಂದ ಸುತ್ತುವರೆದಿದ್ದ ಅದೊಂದು ಹಜಾರ. ಸಂಪೂರ್ಣವಾಗಿ ನೀರವತೆ ಹಜಾರವನ್ನು